ಬಿಳಿಗಿರಿರಂಗನ ಬೆಟ್ಟದಿಂದ ಮೈಸೂರಿಗೂ ಸಂಚರಿಸುತ್ತಿವೆ. ಪ್ರಸ್ತುತ ಈ ಸಾರಿಗೆಗಳನ್ನು ಆಗತ್ಯ ಕ್ಕನುಗುಣವಾಗಿವೆಯೆಂದು ಮನೆಗಾಣಲಾಗಿದೆ. ಈಗಾಗಲೇ ಮಳೆಗಾಲ ಪ್ರಾರಂಭವಾಗಿದ್ದು ಪ್ರಯಾಣಿಕರ ಒತ್ತಡ ಕಡಿಮೆ ಇರುತ್ತದೆ. ಹಾಗಾಗಿ ಹೆಚ್ಚಿನ ಸಾರಿಗೆಗಳು ಸದ್ಯಕ್ಕೆ ಆಗತ್ಯ ವಾಗಿರುವುದಿಲ್ಲ.

(೫) ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ಕಾರ್ಯಕಾರಿ ಅಭಿಯಂತರರು ಕಟ್ಟಿಸಿದ ಶಾಲಾ ಕೊಠಡಿಗಳ ಬಗ್ಗೆ

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ).—ಮಾನ್ಯ ಅಧ್ಯಕ್ಷರೆ, ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ಕಾರ್ಯನಿರ್ವಾಹಕ ಅಭಿಯಂತರರು, ಮಲಪ್ರಭಾ ಪ್ರಾಜೆಕ್ಟ್ ಸವಿಲಿತೀರ್ಥ ಇವರು ಎಂಟು ಶಾಲೆ ಕೋಣೆಗಳನ್ನು ೧೯೭೪ನೇ ಇಸವಿಯಲ್ಲಿ ಕಟ್ಟಿಸಿದರು. ಆದರೆ ಅದರ ಗುಣಮಟ್ಟ ಚೆನ್ನಾಗಿಲ್ಲದೆ ಇರುವುದರಿಂದ ಆವುಗಳನ್ನು ಶಿಕ್ಷಣ ಇಲಾಖೆಗೆ ಇದುವರೆಗೆ ಹಸ್ತಾಂತರ ಮಾಡಿರುವುದಿಲ್ಲ. ಈಗ ಆ ಎಂಟು ಶಾಲೆ ಕೋಣೆಗಳು ಬಿದ್ದಿದ್ದು ಕಿಟಕಿ ಬಾಗಿಲುಗಳನ್ನು ಜನರು ತೆಗೆದುಕೊಂಡು ಹೋಗಲಿಕ್ಕೆ ಹತ್ತಿರುವರು. ಮತ್ತು ಮಕ್ಕಳ ಮೇಲೆ ಯಾವುದೇ ಪ್ರಸಂಗ ದಲ್ಲಿ ಶಾಲೆ ಬೀಳುವ ಪರಿಸ್ಥಿತಿ ಇದೆ. ಆದುದರಿಂದ ಕೂಡಲೇ ಆ ಕಟ್ಟಡವನ್ನು ಕೆಡವಿ ಅದೇ ಜಾಗದಲ್ಲಿ ಅದೇ ಕಲ್ಲು ಮಣ್ಣು ಕಿಟಕಿ, ಬಾಗಿಲು ಉಪಯೋಗಿಸಿ ಶಾಲೆ ಕೋಣೆ ಕಟ್ಟಡ ಕಟ್ಟಲು ಮುಖ್ಯ ಇಂಜಿನಿಯರ್, ಇರಿಗೇಷನ್ ಉತ್ತರ ವಲಯ, ಬೆಳಗಾಂ ಇವರಿಗೆ ಆದೇಶ ನೀಡಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆಗೆ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಮಲಪ್ರಭಾ ಯೋಜನೆಯ ಸಂಗೊಳ್ಳಿ ಪುನರ್ವಸತಿ ಗ್ರಾಮದಲ್ಲಿ ೧೯೭೪ನೇ ಸಾಲಿನಲ್ಲಿ ೮ ಕೊಠಡಿ ಗಳುಳ್ಳ ಶಾಲಾ ಕಟ್ಟಡವನ್ನು ಯೋಜನೆಯ ಪುನರ್ವಸತಿ ಅನುದಾನದಲ್ಲಿ ಕಟ್ಟಲಾಯಿತು. ಈ ಶಾಲಾ ಕಟ್ಟಡದ ಗುಣಮಟ್ಟ ಉತ್ತಮವಾಗಿಲ್ಲದುದರಿಂದ ಈ ಕಟ್ಟಡದಲ್ಲಿ ಶಾಲೆ ನಡೆಸಲಾಗಲಿಲ್ಲ. ಈ ಕಟ್ಟಡ ವನ್ನು ಸಂಬಂಧಿಸಿದ ಅಧೀಕ್ಷಕ ಇಂಜಿನಿಯರ್‌ರವರು ದಿನಾಂಕ ೨೭ನೇ ಸೆಪ್ಟೆಂಬರ್ ೧೯೮೫ರಲ್ಲಿ ಪರಿವೀಕ್ಷಣೆ ನಡೆಸಿ ಶಾಲೆಯನ್ನು ನಡೆಸಲು ಕಟ್ಟಡವೂ ಯೋಗ್ಯವಿಲ್ಲವೆಂದು ವರದಿ ಮಾಡಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ : ಪಿಡಬ್ಲ್ಯೂಡಿ ೧೭೬ ಎಸ್.ಡಿ.ಎ ೮೧ ದಿನಾಂಕ ೩ನೇ ಡಿಸೆಂಬರ್ ೧೯೮೬ ರಲ್ಲಿ ಈ ವಿಷಯವಾಗಿ ವಿಚಾರಣೆ ನಡೆಸಲು ಲೋಕಾಯುಕ್ತದ ರಿಜಿಸ್ಟ್ರಾರ್ ನಂ. ೫ ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಯಿತು. ಈ ಸಂಬಂಧದಲ್ಲಿ ಲೋಕಾಯುಕ್ತದ ವರದಿ ಇನ್ನೂ ಬಂದಿರುವುದಿಲ್ಲ. ಈ ಶಾಲಾ ಕಟ್ಟಡದ ವಿಚಾರಣೆಯು ಲೋಕಾಯುಕ್ತದ ಮುಂದೆ ಇರುವುದರಿಂದ ಈ ಹಂತದಲ್ಲಿ ಅಲ್ಲಿ ಕಟ್ಟಡವನ್ನು ಬೇಸ್‌ಮೆಂಟ್ ಮಟ್ಟದವರೆಗೂ ಕೆಡವಿ ಅದರಿಂದ ದೊರೆಯುವ ಕಿಟಕಿ, ಬಾಗಿಲು ಮತ್ತು ಇತರ ಸಾಮಾಗ್ರಿಗಳನ್ನು ಉಪಯೋಗಿಸಿಕೊಂಡು ಹೊಸ ಕಟ್ಟಡವನ್ನು ಕಟ್ಟಲು ಸಾಧ್ಯವಿಲ್ಲ. ಆದರೂ ಈ ಶಾಲಾ ಕಟ್ಟಡದ ಬಳಿ ಮಕ್ಕಳು ಹೋಗಿ ಆದರಿಂದ ತೊಂದರೆ ಆಗದಂತೆ ತಡೆಯಲು ಈ ಶಾಲಾ ಕಟ್ಟಡದ ಸುತ್ತಲೂ ಬೇಲಿ ಹಾಕಿಸಲಾಗುವುದು.

ಸ್ಥಳೀಯ ಶಾಸಕರ ಕೋರಿಕೆಯಂತೆ ಒಂದು ಹೊಸ ಶಾಲಾ ಕಟ್ಟಡವನ್ನು ಈ ಪುನರ್ವಸತಿ ಕೇಂದ್ರದಲ್ಲಿ ಕಟ್ಟಿಕೊಡಲಾಗಿದ್ದೂ ಈ ಕಟ್ಟಡದಲ್ಲಿ ಶಾಲೆಯನ್ನು ಈಗಾಗಲೇ ನಡೆಸಲಾಗುತ್ತಿದೆ.

[೬] ದಕ್ಷಿಣ ಕನ್ನಡದ ಕಂಬಳಗದ್ದೆಯ ಶ್ರೀಮತಿ ಸುಜಾತ ಮತ್ತು ಶ್ರೀ ಜಯರಾಮ ಶೆಟ್ಟಿ ಯವರಿಗೆ ರಕ್ಷಣೆ.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡದ ಕಂಬಳಗದ್ದೆಯ ಮನೆ ಬೈದೆಬೆಟ್ಟುವಿನ ಭೋಜರಾಜ ಶೆಟ್ಟಿಯ ಮಗಳು ಸುಜಾತಾ ಹಾಗೂ ಕೆಂಜೂರು ಗ್ರಾಮದ ಬೇರಾಲು ನಾರಾಯಣ ಶೆಟ್ಟರ ಮಗ ಜಯರಾಮ ಶೆಟ್ಟಿ ಸಂಬಂಧಿಕರಾಗಿದ್ದು ಒಬ್ಬರನೊಬ್ಬರು ಪ್ರೀತಿಸಿ ಮದುವೆ ಯಾಗುವ ಹಂತಕ್ಕೆ ಬಂದಾಗ ಸುಜಾತಳ ತಂದೆ ಅದನ್ನು ವಿರೋಧಿಸಿ ಅವರಿಗೆ ನಾನಾ ತರಹದ ಚಿತ್ರ ಹಿಂಸೆ ಕೊಟ್ಟು ಜಯರಾಮನಿಗೆ ಹೊಡೆದು ಜಖಂ ಮಾಡಿ ಚಿಕಿತ್ಸೆಗಾಗಿ ಮಂಗಳೂರು ಆಸ್ಪತ್ರೆಗೆ ಸೇರಿ ಚಿಕಿತ್ಸೆ ಪಡೆದು ಈಗ ಅವರು ಮದುವೆಯಾಗಿ ಅವರ ಸಂಬಂಧಿಕರಲ್ಲೊಬ್ಬರ ಮನೆಯಲ್ಲಿ ಗುಪ್ತವಾಗಿ

ಇರುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಅವರು ಪ್ರಾಯಕ್ಕೆ ಬಂದವರಾದುದರಿಂದ ಮತ್ತು ಸ್ವಯಿಚ್ಛೆಯಿಂದ ಮದುವೆಯಾದುದರಿಂದ ಇದು ಕಾನೂನಿನನುಸಾರವಾಗಿ ನಡೆದಿರುತ್ತದೆ. ಈಗ ಸುಜಾತಳ ತಂದೆಯು ಕಡೆಯವರಿಂದ ಜೀವಕ್ಕೆ ಬೆದರಿಕೆ ಕೂಡ ಇರುವುದರಿಂದ ಅವರು ತುಂಬಾ ಕಂಗಾಲಾಗಿ ಮುಂದೆ ಧೈರ್ಯವಾಗಿ ಜೀವಿಸುವುದೇ ಕಷ್ಟವಾಗಿದೆ ಎಂಬುದಾಗಿ ದೂರುತ್ತಿದ್ದಾರೆ. ಮಣಿಪಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಂತಹ ಸಮಯದಲ್ಲಿ ಜಯರಾಮ ಮತ್ತು ಅವನ ತಾಯಿ ಸಂಬಂಧಪಟ್ಟ ಕುಂದಾಪುರ ಪೋಲೀಸ್ ಸ್ಟೇಷನ್ನಿಗೆ ಮತ್ತು ಮೇಲಧಿಕಾರಿಗಳಿಗೆ ಫಿರ್ಯಾದು ಕೊಟ್ಟಿರುತ್ತಾರೆ, ಆದ್ದರಿಂದ ಸರ್ಕಾರ ಈ ಬಗ್ಗೆ ಗಮನ ಹರಿಸಿ ಸರಿಯಾದ ತನಿಖೆ ನಡೆಸಿ ಸಂಬಂಧಪಟ್ಟ ಜಯರಾಮಶೆಟ್ಟಿ ಮತ್ತು ಸುಜಾತಳಿಗೆ ರಕ್ಷಣೆ ಕೊಟ್ಟು ಅವರು ಧೈರ್ಯವಾಗಿ ಬದುಕುವಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಾಜಶೇಖರ ಮೂರ್ತಿ (ಹಣಕಾಸಿನ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ ಈ ಉತ್ತರವನ್ನು ನೀಡಲಿಚ್ಛಿಸುತ್ತೇನೆ.

ಕೆಂಜೂರು ಗ್ರಾಮದ ಶ್ರೀ ಜಯರಾಮಶೆಟ್ಟಿ ಹಾಗೂ ಸುಜಾತ ಇವರುಗಳು ಈ ಹಿಂದೆ ಪ್ರೀತಿಸುತ್ತಿದ್ದು, ಸುಜಾತರವರ ಮನೆಯವರ ಇಚ್ಛೆಯ ವಿರುದ್ಧವಾಗಿ ಈ ಮದುವೆ ಮಾಡಿಕೊಂಡಿರುವುದರಿಂದ ಅವರಿಗೆ ಅಪಾಯವಿರುವುದನ್ನು ಗಮನಿಸಿ ಸೂಕ್ತ ರಕ್ಷಣೆ ನೀಡುವಂತೆ ಈಗಾಗಲೇ ದಕ್ಷಿಣ ಕನ್ನಡ ಜಿಲ್ಲಾ ಆರಕ್ಷಕರಿಗೆ ಸೂಚಿಸಲಾಗಿದೆ.

ಛೇರ್ಮನ್.—ಮಾನ್ಯ ಯಡಿಯೂರಪ್ಪನವರೆ, ತಮ್ಮ ನೋಟೀಸ್‌ಗೆ ಮಾನ್ಯ ಮಂತ್ರಿಗಳು ಸಮಯ ಕೇಳಿದ್ದಾರೆ. ನಾಳೆ ತಮ್ಮ ನೋಟೀಸ್‌ಗೆ ಉತ್ತರ ಕೊಡಿಸೋಣ.

(೭) ಕಡೂರು ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವ ಬಗ್ಗೆ

ಶ್ರೀ ಎಂ. ವೀರಭದ್ರಪ್ಪ (ಕಡೂರು).—ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕನ್ನು ಬರಗಾಲಪೀಡಿತ ಪ್ರದೇಶ ಎಂದು ಘೋಷಿಸಬೇಕೆಂದು ಕೋರುತ್ತೇನೆ. ಏಕೆಂದರೆ ಹಿಂದಿನ ವರ್ಷವೂ ನಮ್ಮ ಕ್ಷೇತ್ರ ಮತ್ತು ತಾಲ್ಲೂಕಿನಲ್ಲಿ ಮಳೆ ಬಾರದೆ ಹಿಂಗಾರು ಮುಂಗಾರು ಬೆಳೆ ಯವುದೂ ಆಗಿಲ್ಲ. ಮತ್ತೆ ಈ ವರ್ಷವೂ ಸ್ವಲ್ಪ ಮಳೆಯಾಗಿ ಮುಂಗಾರು ಬೆಳೆ ಬಿತ್ತಿದ ಮೇಲೆ ಯಾವ ಮಳೆಯೂ ಬರದೇ ಇದ್ದುದರಿಂದ, ಇದ್ದಂಥ ಅಲ್ಪಸ್ವಲ್ಪ ಫಸಲು ಒಣಗಿ ತೆಂಗಿನ ಮರಕ್ಕೆ ಕಪ್ಪು ತಲೆ ಹುಳು ಬಿದ್ದು ಬೆಳೆಯನ್ನು ನಾಶ ಮಾಡುತ್ತಿದೆ. ಯಾವರೀತಿಯ ಬೆಳೆಯೂ ಆಗದೆ ಜನಜೀವನಕ್ಕೆ ತುಂಬಾ ತೊಂದರೆಯಾಗಿದ್ದು ಸಾಮಾನ್ಯ ಜನರು ಕಂಗಾಲಾಗಿ ಜನಜೀವನ ಅಸ್ತವ್ಯಸ್ತವಾಗಿದೆ. ಜೀವನೋಪಾಯಕ್ಕೆ ಯಾವ ಕೆಲಸವೂ ಇಲ್ಲವಾಗಿರುತ್ತದೆ. ಈ ಬಗ್ಗೆ ಕಂದಾಯ ಸಚಿವರು ಕೂಡಲೇ ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳಲು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಕೆ.ಎಚ್. ಪಾಟೀಲ್ (ಮಾನ್ಯ ಕಂದಾಯ ಮತ್ತು ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನಲ್ಲಿ ಪ್ರಸಕ್ತ ಮುಂಗಾರು ಸಾಲಿನಲ್ಲಿ ಕಡಿಮೆ ಮಳೆ ಆಗಿರುವುದು ಸರಕಾರದ ಗಮನದಲ್ಲಿ ಇದೆ. ಅವಶ್ಯ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆಗಾಗಿ ಚಿಕ್ಕಮಗಳೂರು ಜಿಲ್ಲೆಗೆ ಈಗಾಗಲೇ ೫ ಲಕ್ಷ ರೂಪಾಯಿಗಳನ್ನು ಅಭಾವ ಪರಿಹಾರದಡಿ ಬಿಡುಗಡೆ ಮಾಡಿದೆ ಗ್ರಾಮೀಣ ಆಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ ಕೃಷಿ ಕಾರ್ಮಿಕರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸುವ ಕಾರ್ಯಕ್ರಮ ಈಗಾಗಲೇ ಜಾರಿಯಲ್ಲಿದೆ. ಅಗತ್ಯಬಿದ್ದಲ್ಲಿ ಅಭಾವ ಪರಿಹಾರದಡಿ ಹೆಚ್ಚಿನ ಪ್ರಮಾಣದಲ್ಲಿ ಕಾರ್ಯಕ್ರಮಗಳನ್ನು ಸಹ ಕೈಗೊಳ್ಳಲಾಗುವುದು. ಮುಂಗಾರು ಬೆಳೆ ಸದ್ಯದ ಪರಿಸ್ಥಿತಿಯಲ್ಲಿ ಕುಂಠಿತವಾಗಿದ್ದು ಈ ಬೆಳೆ ಇಡಲು ಸಮಯ ಪೂರ್ಣವಾಗಿಲ್ಲ. ಉಳಿದ ಸಮಯದಲ್ಲಿ ಮಳೆ ಬಂದಲ್ಲಿ ಅಗತ್ಯವಿರುವ ಸೌಲಭ್ಯಗಳನ್ನು ರೈತರಿಗೆ ಒದಗಿಸಿ ಬೆಳೆ ಇಡುವ ಕಾರ್ಯಕ್ರಮ ಕೈಗೊಳ್ಳಲಾಗುವುದು. ತೆಂಗಿನ ಮರಕ್ಕೆ ಕಪ್ಪು ತಲೆ ಹುಳುಬಿದ್ದು ಬೆಳೆ ಹಾನಿ ಗೀಡಾಗುತ್ತಿರುವ ಬಗ್ಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಈಗಾಗಲೇ ಸೂಕ್ತ ಕ್ರಮಕೈಗೊಳ್ಳಬೇಕಾಗಿದೆ.

ಶ್ರೀ ಎಂ. ವೀರಭದ್ರಪ್ಪ.—ಈಗಾಗಲೇ ತೋಟಗಾರಿಕೆ ಇಲಾಖೆಯಿಂದ.....

ಛೇರ್ಮನ್.—ಇದರ ಮೇಲೆ ಚರ್ಚೆ ಇಲ್ಲ.